೫) ೩೫೩೩.೫೭ ಹೆಕ್ಟೇರ್ ರೆವಿನ್ಯೂ ಪ್ರದೇಶದಲ್ಲಿ ಈ ಕೆಳಕಂಡ ನಿಗಮಗಳು ನೀಲಗಿರಿ ಮರ ಗಳನ್ನು ಬೆಳೆಸಲು ಉಪಯೋಗಿಸಿ, ಜವಾಬ್ದಾರಿಯನ್ನು ವಹಿಸಿದೆ.

೧	ಮೈಸೂರು ಕಾಗದದ ಕಾರ್ಖಾನೆ ನಿಯಮಿತ.	೧೬೫೩.೦೦ ಹೆಕ್ಟೇರ್
೨	ಕರ್ನಾಟಕ ಪಲ್ಪ್‌ವುಡ್ ನಿಗಮ	೯೧೯.೦೭ ,,
೩	ಕರ್ನಾಟಕ ಅರಣ್ಯಾಭಿವೃದ್ಧಿ ನಿಗಮ.	೯೬೧.೫೦ ,,
		೩೫೩೩.೫೭ ಹೆಕ್ಟೇರ್

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆ ನಿಗಮ, ಕರ್ನಾಟಕ ಅರಣ್ಯಾಭಿವೃದ್ಧಿ ನಿಗಮ, ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಹೀಗೆ ನಾನಾ ನಿಗಮಗಳ ಆಗಮದಿಂದ ಏನು ಲಾಭವಿದೆ ? ಪ್ರತಿಯೊಂದು ನಿಗಮಗಳು ನಷ್ಟವಾಗಿರುವುದನ್ನು ಕಾಣುತ್ತಿದ್ದೇವೆ ಇದಕ್ಕೆ ಕಾರಣವೇನು ?

ಶ್ರೀ ಆರ್. ಸಿ. ಜಗಜಿಣಗಿ.—ಇದಕ್ಕೆ ನಿರ್ದಿಷ್ಟವಾದ ಕಾರಣ ಹೇಳುವುದು ಬಹಳ ಕಷ್ಟ. ಲಾಸ್ ಆಗುವುದಕ್ಕೆ ಕಾರಣವೇನು ಎನ್ನುವ ಮಾಹಿತಿ ನನ್ನ ಹತ್ತಿರವಿಲ್ಲ. ಮಾನ್ಯ ಸದಸ್ಯರಿಗೆ ವಿವರ ಗಳನ್ನು ಒದಗಿಸಿ ಕೊಡುತ್ತೇನೆ.

ದಿನದಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕಾಳಿನದಿ ಹಾಗೂ ಬೇಡ್ತಿ ಜಲವಿದ್ಯುತ್ ಯೋಜನೆಯ ಬಗ್ಗೆ

೧೮೩೭. ಶ್ರೀ ಎನ್. ಎಂ. ಆಡ್ಯಂತಾಯ (ಸುರತ್ಕಲ್).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೮) ಕಾಳಿನದಿ ಜಲವಿದ್ಯುತ್ ಯೋಜನೆ ಸಮೂಹದಿಂದ ಉತ್ಪಾದಿಸಬಹುದಾದ ಜಲವಿದ್ಯುತ್‌ನ ಒಟ್ಟು ಅಂದಾಜು ಪ್ರಮಾಣವೆಷ್ಟು ? (ಪ್ರತಿ ಹಂತದ ಪ್ರತ್ಯೇಕ ವಿವರ ನೀಡುವುದು)

೯) ಈವರೆಗೆ ಈ ಯೋಜನೆ ಸಮೂಹಕ್ಕೆ ಖರ್ಚು ಮಾಡಿದ ಹಣವೆಷ್ಟು ?

೧೦) ಗಂಗವಳ್ಳಿ (ಬೇಡ್ತಿ) ಜಲವಿದ್ಯುತ್ ಯೋಜನೆಗಾಗಿ ಈವರೆಗೆ ಖರ್ಚು ಮಾಡಿದ ಹಣವೆಷ್ಟು ಮತ್ತು ಈ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

೧೧) ಗಂಗವಳ್ಳಿ ಯೋಜನೆಯಲ್ಲಿ ನಿರ್ಮಿಸಿದ "ಮಾಗಜಾಡ" ನಲ್ಲಿರುವ ಕೆ. ಪಿ. ಸಿ. ನಿವಾಸ ಗಳನ್ನು ಈಗ ಏತಕ್ಕಾಗಿ ಉಪಯೋಗಿಸಲಾಗುತ್ತಿದೆ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

೮) ಮತ್ತು ೯) ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದೆ.

೧೦) ಬೇಡ್ತಿ ಜಲವಿದ್ಯುತ್ ಯೋಜನೆಗಾಗಿ ಈವರೆಗೆ ೯.೦೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಯೋಜನೆಯ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ.

೧೧) ಕೆಲವು ನಿವಾಸಗಳನ್ನು ಅರಣ್ಯ ಕಾಲೇಜು ಪ್ರಾರಂಭಿಸಲು, ಕಷ್ಟಿ ವಿಶ್ವವಿದ್ಯಾನಿಲಯಕ್ಕೆ ಪೋಲೀಸ್ ತರಬೇತಿ ಶಾಲೆಗಾಗಿ ಪೊಲೀಸ್ ಇಲಾಖೆಗೆ ಕೊಟ್ಟಿರುತ್ತದೆ. ಕೆಲವು ಕಟ್ಟಡಗಳನ್ನು ವಿದ್ಯುತ್ ನಿಗಮದ ಉಸ್ತುವಾರಿ ಕೆಲಸಗಳಿಗಾಗಿ ಇಟ್ಟುಕೊಳ್ಳಲಾಗಿದೆ.

ಅನುಬಂಧ

	ಘಟಕಗಳ ಸಾಮರ್ಥ್ಯ (ಮೆ.ವಾ)	ಒಟ್ಟು ಸ್ಥಾಪಿತ ಸಾಮರ್ಥ್ಯ (ಮೆ.ವಾ)	ವಾರ್ಷಿಕ ವಿದ್ಯುತ್ ಉತ್ಪಾದನೆ (ದಶ ಲಕ್ಷ ಯೂನಿಟ್‌ಗಳಲ್ಲಿ)	ಈವರೆಗೆ ವಿಚಾರದ ಹಣ (ಕೋಟಿ ರೂ. ಗಳಲ್ಲಿ)
೧ ಮೊದಲನೆ ಹಂತ				
ನಾಗಝರಿ	೮೧೦)	೯೧೦	೩೩೮೫	೩೪೬.೦೪
ಸೂಪಾ	೧೦೦)		೬೪೨	
೨ ಎರಡನೇ ಹಂತ				
ದಾಂಡೇಲಿ	೬೦)			
ಕೊಡಸಳ್ಳಿ	೧೨೦)	೩೩೦	೧೨೯೪	೧೩.೭೮
ಕದ್ರಾ	೧೫೦)			
೩ ಮೂರನೆ ಹಂತ	–	೪೦೦	೧೧೦೦	–

ತುಮಕೂರು ಜಿಲ್ಲೆ ಮಲ್ಲಸಂದ್ರ ಗ್ರಾಮದಲ್ಲಿ ಮಿಲ್ಕ್ ಪೌಡರ್ ಕಾರ್ಖಾನೆಯ ಸ್ಥಾಪನೆ ಬಗ್ಗೆ

೧೭೧೧. ಶ್ರೀ ಜಿ.ಎಸ್. ಶಿವಸಂಜಪ್ಪ (ಗುಬ್ಬಿ).–ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಕ್ಷ ಹಾಗೂ ಪಶುಸಂಗೋಪನ ಮಂತ್ರಿಗಳು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆ ಮಲ್ಲಸಂದ್ರ ಗ್ರಾಮದಲ್ಲಿ ಮಿಲ್ಕ್ ಪೌಡರ್ ಕಾರ್ಖಾನೆಯನ್ನು ಸ್ಥಾಪಿಸುವ ಯೋಜನೆ ಸರ್ಕಾರದವರಿಗಿದೆಯೇ ?

ಆ) ಹಾಗಿದ್ದಲ್ಲಿ ಸದರಿ ಕಾರ್ಖಾನೆಯನ್ನು ಸ್ಥಾಪಿಸುವುದು ಯಾವಾಗ ?

ಇ) ಸದರಿ ಕಾರ್ಖಾನೆಯನ್ನು ಸ್ಥಾಪಿಸಲು ಸರ್ಕಾರವು ನಿಗದಿಪಡಿಸಿರುವ ಅಂದಾಜು ವೆಚ್ಚವೆಷ್ಟು?

ಈ) ಈ ಕಾರ್ಖಾನೆಯನ್ನು ಸ್ಥಾಪಿಸಿದಲ್ಲಿ ನೇಮಿಸಬಹುದಾದ ಕಾರ್ಮಿಕರ ಸಂಖ್ಯೆ ಎಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಇದೆ

ಆ) ೧೯೯೧ರ ವೇಳೆಗೆ ಸ್ಥಾಪಿಸಲು ಯೋಜಿಸಲಾಗಿದೆ

ಇ) ಅಂದಾಜು ವೆಚ್ಚ ರೂ. ೯೮ ಲಕ್ಷಗಳು

ಈ) ಅವಶ್ಯಕತೆಗನುಗುಣವಾಗಿ ಕಾರ್ಮಿಕರನ್ನು ನೇಮಿಸಲಾಗುವುದು